Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/52/2022-23

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪ-ವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ;22
ಬೆಂಗಳೂರು – 560032.
ದಿನಾಂಕ: 18-06-2022

**ದಿನಾಂಕ; 18-06-2022 ರಂದು ವಾರ್ಡ್ ಸಮಿತಿ ಸಭೆಯ ನಡವಳಿಗಳು;-**

- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ರವರು
- ಶ್ರೀಮತಿ. ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ನಿರ್ವಹಣೆ
- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ಮುನಿರಾಮಣ್ಣ, ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಬ್ಲೂ.ಎ ಸದಸ್ಯರು
- ಶ್ರೀ ಫರ್ನಾಂಡಿಸ್, ನಾಗರೀಕರು ಕನಕನಗರ
- ಶ್ರೀ ಮನೀಶ್, ನಾಗರೀಕರು
- ಶ್ರೀ ಪುನೀತ್ ಕುಮಾರ್, ನಾಗರೀಕರು ಕನಕನಗರ
- ಶ್ರೀಮತಿ. ಎ.ಕೆ ಪ್ರೇಮ ಕುಮಾರಿ, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀಮತಿ ನೆನೂ ರವಿ, ನಾಗರೀಕರು ಸನ್ ರೈಸ್ ಕಾಲೋನಿ
- ಶ್ರೀ. ಮಧುಸುಧಾನ್ ಎಂ.ಕೆ, ನಾಗರೀಕರು
- ಶ್ರೀ. ಸೂರಿ, ನಾಗರೀಕರು

Bruhat Bengaluru Mahanagara Palike

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮತಿ ಕಾರ್ಯದರ್ಶಿಯವರಾದ ಶ್ರೀ. ಗುರುಸಿದ್ದಪ್ಪ .ಜಿ, ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ; 22ರ ನಾಗರೀಕರು ಹಾಗೂ ಎಲ್ಲ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಗುರುಸಿದ್ದಪ್ಪ. ಜಿ ವಾರ್ಡ್ ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು, ಹಾಗೂ ದಿನಾಂಕ; 21-05-2022 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಮುನಿರಾಮಣ್ಣ, ವಾರ್ಡ್ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ವಾರ್ಡ್‌ನಲ್ಲಿ ಮತ್ತೆ ಕೋವಿಡ್ +veಕೇಸ್‌ಗಳು ಹೆಚ್ಚಾಗುವ ಸಾಧ್ಯತೆಗಳಿರುವುದರಿಂದ ಅದಕ್ಕೆ ಸಂಬಂಧಪಟ್ಟಂತೆ ಕೋವಿಡ್ ಕೇಸ್‌ಗಳನ್ನು ತಡೆಗಟ್ಟುವಂತೆ ಮುಂಜಾಗ್ರತೆ ಕ್ರಮಕೈಗೊಳ್ಳುವಂತೆ ತಿಳಿಸಿದರು.
- ಹಾಗೂ ಎ.ಕೆ ಕಾಲೋನಿಯ ರಸ್ತೆಗಳಲ್ಲಿ ಶ್ರೀ ರವಿ ಗುತ್ತಿಗೆದಾರರಿಂದ ಒಳಚರಂಡಿ ಹೂಳೆತ್ತೂವ ಹಾಗೂ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ಸಭೆಗೆ ಹಾಜರಿದ್ದ ಸದಸ್ಯರೊಂದಿಗೆ ಚರ್ಚಿಸಲಾಯಿತ್ತು
- ಶ್ರೀ. ಉದಯ್ ಚಂದನ್, ಕೆ.ಆರ್.ಡ್ಯ್ಲೂ.ಎ ಸದಸ್ಯರು ಮಾತನಾಡುತ್ತಾ, ಕನಕನಗರದ 7ನೇ ಮತ್ತು 8ನೇ ಅಡ್ಡರಸ್ತೆ ರಸ್ತೆಯು ತೀರಾ ಹಾಳಾಗಿರುವುದರಿಂದ ರಸ್ತೆಯನ್ನು ಮರು ಡಾಂಬರೀಕರಣ ಮಾಡುವಂತೆ ಹೇಳಿದರು. ಹಾಗೂ ಕನಕನಗರದ 10ನೇ 'ಎ' ಅಡ್ಡರಸ್ತೆಯಲ್ಲಿ ಗುಂಡಿ ಬಿದ್ದಿರುವುದರಿಂದ ಅದನ್ನು ಶೀಘ್ರವಾಗಿ ರಸ್ತೆ ಗುಂಡಿಯನ್ನು ಮುಚ್ಚುವಂತೆ ತಿಳಿಸಿದರು.
- ಶ್ರೀಮತಿ ಪ್ರೇಮ ಕುಮಾರಿ, ಸನ್ ರೈಸ್ ಕಾಲೋನಿ ನಾಗರೀಕರು ಮಾತನಾಡುತ್ತಾ 1ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯು ಹಾಳಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು.
- ಸನ್‌ರೈಸ್ ಕಾಲೋನಿಯ ಅಡ್ಡರಸ್ತೆ ಹಾಗೂ ಮುಖ್ಯರಸ್ತೆಗಳಲ್ಲಿ Street light ಗಳನ್ನು ಹಾಳಾಗಿರುವುದರಿಂದ ಶೀಘ್ರವಾಗಿ ಅದನ್ನು ಸರಿಪಡಿಸುವಂತೆ ತಿಳಿಸಿದರು. ಈಗಾಗಲೇ Street light ಗಳನ್ನು ಸರಿಪಡಿಸಿರುವುದಾಗಿ ಸಂಬಂಧಪಟ್ಟ ಅಧಿಕಾರಿ ತಿಳಿಸಿದರು.
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡಿನಲ್ಲಿ ಕೋವಿಡ್ +ve ಕೇಸ್‌ನ ಸಂಖ್ಯೆಗಳು ಹೆಚ್ಚಾಗುತ್ತಿರುವುದರಿಂದ ತಪ್ಪದೇ ಸಾರ್ವಜನಿಕರಿಗೆ ಮಾಸ್ಕ್ ಧರಿಸುವುದು ಮತ್ತು ಸ್ಯಾನಿಟೈಸರ್ ಬಳಸುವ ಬಗ್ಗೆ ಮುನ್ನೆಚ್ಚರಿಕೆ ಕ್ರಮವಹಿಸಿರುವುದಾಗಿ ತಿಳಿಸಿದರು. ಅದರಂತೆ 12 ರಿಂದ 14 ವರ್ಷದ ಮಕ್ಕಳಿಗೆ ಈಗಾಗಲೇ 80% ರಿಂದ 90% ನಷ್ಟು ವ್ಯಾಕ್ಸಿನೇಶನ್ ನೀಡುವುದು ಮತ್ತು ವಾರ್ಡಿನಲ್ಲಿ ಔಷಧ ಸಿಂಪಡಣೆ (Fogging spray) ಮಾಡುವ ಬಗ್ಗೆ ದೂರವಾಣಿ ಮೂಲಕ (ರಜೆ ಇದ್ದುದ್ದರಿಂದ) ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತ್ತು.

Bruhat Bengaluru
Mahanagara Palike

- ವಾರ್ಡಿನ ವ್ಯಾಪ್ತಿಯಲ್ಲಿ ಡೆಂಗ್ಯೂ ಹಾಗೂ ಮಲೇರಿಯಾ ರೋಗ ಹೆಚ್ಚಾಗುತ್ತಿರುವುದರಿಂದ ಅದನ್ನು ತಡೆಗಟ್ಟುವಂತೆ ಸೂಕ್ತ ಕ್ರಮಕೈಗೊಳ್ಳುತ್ತೀರುವ ಬಗ್ಗೆ ತಿಳಿಸಿದರು. ಹಾಗೂ 60 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಬೂಸ್ಟರ್ ಡೋಸ್‌ಗಳನ್ನು ನೀಡುತ್ತಿರುವುದಾಗಿ ತಿಳಿಸಿದರು. ಹಾಗೂ 60 ವರ್ಷಕ್ಕಿಂತ ಕೆಳಗಿನವರಿಗೆ ಅಗತ್ಯವಿದ್ದರೆ ಖಾಸಗಿ ಆಸ್ಪತ್ರೆಗಳಲ್ಲಿ ಬೂಸ್ಟರ್ ಡೋಸ್ ತೆಗೆದುಕೊಳ್ಳಬಹುದಾಗಿ ತಿಳಿಸಿದರು
- ಶ್ರೀ. ಮಧು, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ವಾರ್ಡಿನಲ್ಲಿ ಕಸದ ನಿರ್ವಹಣೆ ಸರಿಯಾದ ರೀತಿಯಲ್ಲಿ ಮಾಡುತ್ತೀರುವ ಬಗ್ಗೆ ಸಭೆಯಲ್ಲಿದ್ದ ಜನರಿಗೆ ತಿಳಿಸಿದರು.
- ಶ್ರೀ ಗುರುಸಿದ್ದಪ್ಪ, ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಅಲ್ಲಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ವೆಟ್ ಮಿಕ್ಸ್ ಮತ್ತು ಡಾಂಬರು ಮಿಶ್ರಿತ ಜಲ್ಲಿಕಲ್ಲುಗಳಿಂದ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಕೂಡಲೇ ಪ್ರಾರಂಭಿಸುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ತಿಳಿಸಲಾಯಿತು.
- ಶ್ರೀ ಮನೀತ್ ಕುಮಾರ್, ನಾಗರೀಕರು ಮಾತನಾಡುತ್ತಾ, ಕನಕನಗರದ 1ನೇ ಮುಖ್ಯರಸ್ತೆ ಗಣೇಶ ದೇವಸ್ಥಾನದ ಹತ್ತಿರ ಗುಂಡಿ ಬಿದ್ದಿರುವುದರಿಂದ ವೆಟ್ ಮಿಕ್ಸ್ ಮತ್ತು ಡಾಂಬರಿನಿಂದ ಶೀಘ್ರವಾಗಿ ಬಿದ್ದಿರುವ ರಸ್ತೆ ಗುಂಡಿಯನ್ನು ಮುಚ್ಚುವಂತೆ ತಿಳಿಸಿದರು
- ಶ್ರೀಮತಿ ನೆನೂ ರವಿ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ 1ನೇ ಅಡ್ಡರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ Street light ಗಳನ್ನು ಸರಿಪಡಿಸುವಂತೆ ತಿಳಿಸಿದರು.
- ಶ್ರೀ. ಮಧುಸುಧಾನ್ ಎಂ.ಕೆ, ನಾಗರೀಕರು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯ ಮುಖ್ಯರಸ್ತೆಯಲ್ಲಿ ಒಣಮರಗಳಿರುವುದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಒಣಮರಗಳನ್ನು ತೆರವುಗೊಳಿಸುವಂತೆ ತಿಳಿಸಿದರು.
- ಶ್ರೀ ಸುರೇಶ್, ನಾಗರೀಕರು ಮಾತನಾಡುತ್ತಾ, ವಾರ್ಡಿನ ರಸ್ತೆ ಬದಿಯಲ್ಲಿ ಅಲ್ಲಲ್ಲಿ ಕಸ ಬಿದ್ದಿರುವುದರಿಂದ ಕೂಡಲೇ ಅದನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು ಹಾಗೂ ಕೆಲವು ರಸ್ತೆಯಲ್ಲಿ ಸರಿಯಾಗಿ ಕಸ ನಿರ್ವಹಣೆ ಆಗದೇ ಇರುವುದರಿಂದ ಕೂಡಲೇ ಕಟ್ಟುನಿಟ್ಟಿನ ಕ್ರಮವಹಿಸಬೇಕೆಂದು ತಿಳಿಸಿದರು.
- ಶ್ರೀ. ಸೂರಿ, ನಾಗರೀಕರು ಮಾತನಾಡುತ್ತಾ, ಪಟೇಲ್ ಮುನಿಯಪ್ಪ ಬಡಾವಣೆಯ 5ನೇ ಅಡ್ಡರಸ್ತೆಯಲ್ಲಿ Street light ಗಳು ಹಾಳಾಗಿರುವುದರಿಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ Street lightಗಳನ್ನು ಸರಿಪಡಿಸುವಂತೆ ತಿಳಿಸಿದರು.

Bruhat Bengaluru
Mahanagara Palike

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೆ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಯವರಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮಧ್ಯಾಹ್ನ 01;25ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗುರುಸಿದ್ದಪ್ಪ .ಜಿ)
ವಾರ್ಡ್ ಸಮಿತಿ ಕಾರ್ಯದರ್ಶಿ
ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ:22

ನೋಡೆಲ್ ಅಧಿಕಾರಿಗಳು
ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು